## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಎಸ್.ಸಿ.136/2024

ಅಸಾ ಃ 11
ಚಾಸಾ ಃ 18

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸುರೇಂದ್ರ ಸವದಿ |
| ತಂದೆಯ ಹೆಸರು | ಃ | ನಿಂಗಪ್ಪ |
| ವಯಸ್ಸು | ಃ | 33 ವರ್ಷ |
| ಉದ್ಯೋಗ | ಃ | ಸಿಪಿಸಿ-1160, ಗುತ್ತಲ ಪೊಲೀಸ ಠಾಣೆ, ಗುತ್ತಲ |
| ವಾಸ ಸ್ಥಳ | ಃ | ಗುತ್ತಲ. |

ದಿನಾಂಕಃ **09/12/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ –**

1. 2024 ರಲ್ಲಿ ನಾನು ಹಾವೇರಿ ಶಹರ ಪೊಲೀಸ ಠಾಣೆಯ ಪೊಲೀಸ ಪೇದೆ ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕಃ21/08/2024 ರಂದು ಈ ಪ್ರಕರಣದ ತನಿಖೆ ಕಾಲಕ್ಕೆ ಮಾಡಲಾದ 2 ಪಂಚನಾಮೆಗಳ ಸಂಬಂಧ ನನ್ನ ಮೊಬೈಲನಲ್ಲಿ ಪೋಟೋ ತೆಗೆದು, ಠಾಣೆಯ ಕಂಪ್ಯೂಟರಗೆ ಕೇಬಲ್ ಮೂಲಕ ವರ್ಗಾಯಿಸಿ, ಅಚ್ಚು ಪಡೆದು ತಂದು ತನಿಖಾಧಿಕಾರಿಗೆ ಕೊಟ್ಟಿದ್ದೇನೆ. ಭಾ.ಸಾ.ಅ. ಕಲಂ.65(ಬಿ) ಅಡಿಯಲ್ಲಿ ಪೋಟೋ ಕುರಿತು ತನಿಖಾಧಿಕಾರಿಗೆ ಪ್ರಮಾಣ ಪತ್ರ ನೀಡಿದ್ದೇನೆ. ನಾನು ನೀಡಿದ ಪ್ರಮಾಣ ಪತ್ರವನ್ನು ಈಗ ನಿಪಿ-18, ನನ್ನ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ನಿಪಿ-2 ರಿಂದ 6, 9 ಮತ್ತು 10 ನಾನು ಪಡೆದ ಪೋಟೋಗಳಿರುತ್ತವೆ.

**ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ಪರ ಶ್ರೀ ಎನ್.ಜಿ.ಎಚ್. ವಕೀಲರಿಂದಃ–**

3. ತನಿಖಾಧಿಕಾರಿ ನನ್ನ ಹೇಳಿಕೆ ಪಡೆದಿಲ್ಲ. ಪೋಟೋ ಪಡೆಯಲು ಉಪಯೋಗಿಸಿದ ಮೊಬೈಲಿನ ವಿವರವನ್ನು ನಿಪಿ-18 ರಲ್ಲಿ ನಮೂದು ಮಾಡಿಲ್ಲ. ಪೋಟೋಗಳ ಮೇಲೆ ದಿನಾಂಕ ಮತ್ತು ಮೊಬೈಲ್ ಹೆಸರು ಕಂಡುಬರುತ್ತದೆ ಎಂದರೆ ಸೆಟ್ಟಿಂಗ್ಸ್‌ನ್ನು ಅವಲಂಬಿಸಿರುತ್ತದೆ. ನಾನು ದಿನಾಂಕ ಮತ್ತು ಮೊಬೈಲ್ ಹೆಸರು ಅಚ್ಚು ಮೂಡುವಂತೆ ಸೆಟ್ಟಿಂಗ್ಸ್ ಮಾಡಿರಲಿಲ್ಲ. ನಾನು ಯಾವುದೇ ಪೋಟೋ ಪಡೆದಿಲ್ಲ ಎನ್ನುವುದು ಸುಳ್ಳು. ತನಿಖಾಧಿಕಾರಿ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ನೀಡಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಪಾಟೀ ಸವಾಲು 3 ನೇ ಆರೋಪಿ ಪರ ಶ್ರೀ ಪಿ.ಬಿ.ಸಿ. ವಕೀಲರಿಂದಃ–**

*(ಮೇಲಿನ ಪಾಟೀ ಸವಾಲನ್ನು ಅನುಮೋದಿಸಿರುತ್ತಾರೆ.)*

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.